there be delay ! ನೀವು ಏಕೆ ಕೊಡುತ್ತಿಲ್ಲ ? ಏಕೆ ಡಿಲೇ ಆಗಿದೆ ? ಕರೆಸ್ಪಾಂಡೆನ್ಸ್ ಏನು ಮಾಡಿದ್ದೀರಿ ? ಯಾರ ಕಡೆಯಿಂದ ಡಿಲೇ ಆಗಿದೆ ಎಂದು ಹೇಳಬೇಕಲ್ಲ.

ಶ್ರೀ ಮಹಮದ್ ಮೊಯಿನುದ್ದೀನ್.—ಹುಡ್ಕೋ ಸಂಸ್ಥೆ ಸರ್ಕಾರಿ ಸಂಸ್ಥೆ ಆಗಿರುವುದಿಲ್ಲ, ಅದು ಆಟಾನಮಸ್ ಬಾಡಿ ಆಗಿದೆ. ಅವರು ೫೦ ಪರ್ಸೆಂಟ್ ರಿಲೀಸ್ ಮಾಡಿದರೆ ನಾವೂ ೫೦ ಪರ್ಸೆಂಟ್ ರಿಲೀಸ್ ಮಾಡಬೆಕು ಎಂದು ಅಲ್ಲ. ಒಂದು ಯೋಜನೆಯಲ್ಲಿ ಎಷ್ಟು ಕೊಡಬೇಕೆಂದು ಅವರು ರಿಲೀಸ್ ಮಾಡುತ್ತಾರೆ, ಮಿಕ್ಕ ಹಣವನ್ನು ನಮ್ಮ consortium of bank ನಿಂದ ಪಡೆದು ಪೂರ್ತಿ ಹಣವನ್ನು ಒದಗಿಸುತ್ತಿದ್ದೇವೆ.

ಅಧ್ಯಕ್ಷರು.—ಮಾನ್ಯ ಜಿ. ಎಸ್. ಶಿವನಂಜಪ್ಪನವರ ಪ್ರಶ್ನೆಯನ್ನು (ಪ್ರಶ್ನೆ ಸಂಖ್ಯೆ–೬೬೫ (೧೩೭೩), ಮಾನ್ಯ ಸಚಿವರು ಟೈಮ್ ಕೇಳಿರುವುದರಿಂದ ೮–೬–೧೯೮೮ಕ್ಕೆ ಮುಂದೂಡಲಾಗಿದೆ.

ರಾಜ್ಯದಲ್ಲಿ ಜೀತವಿಮುಕ್ತರಿಗಾಗಿ ಕೃಷಿ ಕ್ಷೇತ್ರಗಳು.

೨೨೫೧. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ವಕ್ಫ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ಜೀತದಾಳುಗಳ ಪುನರ್ ವಸತಿಗಾಗಿ ರಾಜ್ಯದಲ್ಲಿ ಸ್ಥಾಪಿಸಿರುವ ಆಗ್ರಿಕಲ್ಚರಲ್ ಎಸ್ಟೇಟುಗಳ ಸಂಖ್ಯೆ ಎಷ್ಟು ?

ಬಿ) ಸರ್ಕಾರದಲ್ಲಿ ಮೇಲಿನ ಆಗ್ರಿಕಲ್ಚರಲ್ ಎಸ್ಟೇಟ್‌ಗಳಿಗೆ ಜಮೀನು ಒದಗಿಸಲು ಯಾವುದಾದರೂ ಯೋಜನೆ ಇದೆಯೆ ?

ಸಿ) ೧೯೮೬–೮೭ ಮತ್ತು ೧೯೮೭–೮೮ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಜೀತ ವಿಮುಕ್ತರ ಪುನರ್ ವಸತಿಗಾಗಿ ಮಂಜೂರಾದ ಹಣ, ವೆಚ್ಚ ಮಾಡಿದ ಹಣ, ಸೌಲಭ್ಯ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯ್ತಿ ರಾಜ್ಯ ಮತ್ತು ವಕ್ಫ್ ಸಚಿವರು). —

ಎ) ಎರಡು ಆಗ್ರಿಕಲ್ಚರಲ್ ಎಸ್ಟೇಟುಗಳನ್ನು (ವ್ಯವಸಾಯ ವಸಾಹತು) ಬೆಂಗಳೂರು ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕಿನ ಯಲಹಂಕ ಹೋಬಳಿಯ ಸಂಪಿಗೆಹಳ್ಳಿಯಲ್ಲಿ ಮತ್ತು ಇದೇ ತಾಲ್ಲೂಕಿನ ದಾಸನಪುರ ಹೋಬಳಿ ಲಕ್ಷ್ಮೀಪುರ ಗ್ರಾಮಗಳಲ್ಲಿ ಕ್ರಮವಾಗಿ ೧೮೬–೮೭ನೆ ಮತ್ತು ೧೯೮೫–೮೬ನೇ ಸಾಲುಗಳಲ್ಲಿ ಸ್ಥಾಪಿಸಲಾಗಿರುತ್ತೆ.

ಬಿ) ಇಲ್ಲ, ಜೀತ ವಿಮುಕ್ತರ ಪುನರ್ ವಸತಿ ಯೋಜನೆಯನ್ನು ಕಾರ್ಯಗತ ಮಾಡುತ್ತಿರುವ ಜಿಲ್ಲಾ ಪರಿಷತ್ತುಗಳಿಗೆ ಸಾಧ್ಯವಿರುವ ಕಡೆ ಲಭ್ಯವಿರುವ ಸರ್ಕಾರಿ ಜಮೀನು ಅಥವಾ ಕಮ್ಮಿ ಬೆಲೆಯ ಜಮೀನನ್ನು ಸಾಧ್ಯವಿರುವ ಕಡೆ ಕೊಂಡು ಒದಗಿಸುವಂತೆ ಕೋರಲಾಗಿದೆ.

ಸಿ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮಂಜೂರು ಮಾಡಿದ ಹಣದ ವೆಚ್ಚ ಮಾಡಿದ ಹಣದ, ಫಲಾನುಭವಿಗಳ ಸಂಖ್ಯೆಯ ವಿವರಗಳು ಈ ಕೆಳಕಂಡಂತೆ ಇರುತ್ತೆ.

	೧೯೮೬–೮೭	೧೯೮೭–೮೮
ಕೇಂದ್ರ ಸರ್ಕಾರದಿಂದ ಮಂಜೂರಾದ ಹಣ	ರೂ. ೧,೯೭, ೮೦೦	ಇಲ್ಲಾ
ವೆಚ್ಚ ಮಾಡಿದ ಹಣ	ರೂ, ೪೫೫.೫೪ ಲಕ್ಷ	೩೯೦.೯೮ ಲಕ್ಷ
ಫಲಾನುಭವಿಗಳ ಸಂಖ್ಯೆ	೭೦೮೫	೬೭೦೫

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಉತ್ತರ ಸಮರ್ಪಕವಾಗಿರಬೇಕಾಗಿತ್ತು ಎಂದು ನನ್ನ ಭಾವನೆ. ಈ ಜೀತ ವಿಮುಕ್ತರಿಗೆ ಪುನರ್‌ವಸತಿ ಕಲ್ಪಿಸುವುದಕ್ಕೆ ಸರ್ಕಾರ ಒಂದು ಯೋಜನೆಯನ್ನು ಹಾಕಿಕೊಂಡಿದೆ ಈಗ ಯಾರು ಯಾರು ಜೀತ ವಿಮುಕ್ತರಾಗಿರುತ್ತಾರೆ, ಅಂತಹವರಿಗೆ ಸ್ವಲ್ಪ ಹಣ ಕೊಟ್ಟು ಅವರನ್ನು ಬೇರೆ ದಾರಿಯಲ್ಲಿ ಬಿಡುವುದಕ್ಕೆ ಬದಲು ಅವರಿಗೆ ಸರ್ಕಾರದ ಜಮೀನನ್ನು ಕೊಟ್ಟು ಅಲ್ಲಿಯೇ ಖಾಯಂ ಆಗಿ ನೆಲೆಸುವಂತೆ ಏತಕ್ಕೆ ವ್ಯವಸ್ಥೆ ಮಾಡಬಾರದು ? ನನ್ನ ಕ್ಷೇತ್ರದಲ್ಲಿ ಎರಡು ಕಡೆಗಳಲ್ಲಿ ಇಂತಹ ವ್ಯವಸ್ಥೆಯನ್ನು ಮಾಡಲಾಗಿದೆ. ಇದು ೧೯೮೩-೪೪ರಲ್ಲಿ ಸ್ಥಾಪನೆ ಆಗಿದ್ದು. ಇಂತಹ ಎಸ್ಟೇಟುಗಳನ್ನು ನಮ್ಮ ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ಮಾಡಿದ್ದೀರಿ, ಅಲ್ಲಿ ಎಷ್ಟು ಜನ ಜೀತ ಮುಕ್ತರು ಇದ್ದಾರೆಂಬುದನ್ನು ತಿಳಿಸಬೇಕು. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಎಷ್ಟು ಜನ ಜೀತ ಮುಕ್ತರಿದ್ದಾರೆ, ಇವರಲ್ಲಿ ಎಷ್ಟು ಜನರಿಗೆ ಈ ತಹಲ್‌ವರೆಗೆ ಪುನರ್‌ವಸತಿ ಕಲ್ಪಿಸಲಾಗಿದೆ ಎಂಬುದನ್ನು ತಿಳಿಸಬೇಕು. ಇವರ ಪುನರ್‌ವಸತಿ ಸಲುವಾಗಿ ನೀವು ಕೈಕೊಂಡಿರುವ ಯೋಜನೆಗಳೇನೆಂಬುದನ್ನು ತಿಳಿಸಬೇಕು ? ಇವರುಗಳಿಗೆ ಸರ್ಕಾರದ ಜಮೀನನ್ನು ಒದಗಿಸಲಾಗುವುದೇ ಎಂದು ಕೇಳಿದ ಪ್ರಶ್ನೆಗೆ, ಸರ್ಕಾರದ ಜಮೀನನ್ನು ಇವರುಗಳಿಗೆ ಒದಗಿಸುವುದರ ಮೂಲಕ ಪುನರ್‌ವಸತಿ ಕಲ್ಪಿಸುವಂತಹ ಯೋಜನೆಗಳು ಯಾವುದೂ ಇಲ್ಲ ಎಂದು ಅರ್ಥ ಬರುವ ರೀತಿಯಲ್ಲಿ ಉತ್ತರ ಕೊಟ್ಟಿದ್ದೀರಿ. ಈಗ ಸರ್ಕಾರದ ಬಳಿ ಹೆಚ್ಚುವರಿ ಜಮೀನು ಏನಿದೆ, ಅದನ್ನು ಸಲುವಾಗಿ ಮೀಸಲಿಟ್ಟು, ಅಲ್ಲಿ ಅಗ್ರಿಕಲ್ಚರಲ್ ಎಸ್ಟೇಟ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ?

ಶ್ರೀ ಎಂ.ಪಿ. ಪ್ರಕಾಶ್.—ಕರ್ನಾಟಕ ರಾಜ್ಯದಲ್ಲಿ ಇಲ್ಲಿಯವರೆಗೆ ೬೨೬೮ ಜನರನ್ನು ಜೀತ ಪದ್ಧತಿಯಿಂದ ಬಿಡುಗಡೆ ಮಾಡಲಾಗಿದೆ. ಇವರ ಪೈಕಿ ೪೪೩೩೭ ಜನರಿಗೆ ಪುನರ್‌ವಸತಿಯನ್ನು ಕಲ್ಪಿಸಲಾಗಿದೆ. ಇನ್ನುಳಿದ ೧೮೩೫೨ ಜನರಿಗೆ ಪುನರ್‌ವಸತಿಯನ್ನು ಕಲ್ಪಿಸಿಕೊಡಬೇಕಾಗಿದೆ. ಈ ಜನರ ಬಗ್ಗೆ ಪರಿವೀಕ್ಷಣೆ ನಡೆಸಿದಾಗ ೫೫೨೦ ಜನರು ಪುನರ್‌ವಸತಿಗೆ ಅನರ್ಹರೆಂದು ತಿಳಿದುಬಂದಿದೆ. ಕೆಲವರ ಹೆಸರು ಎರಡು ಮೂರು ಕಡೆಗಳಲ್ಲಿದ್ದರೆ. ಪಟ್ಟಿ ಮಾಡಿದ ವ್ಯಕ್ತಿಗಳ ಪೈಕಿ ಕೆಲವರು ಇಲ್ಲದಿರುವುದೂ ಸಹ ಕಂಡುಬಂದಿದೆ. ಈ ಜೀತಮುಕ್ತರಿಗೆ ತಲವಾರು ೬೨೫೦ ರೂಪಾಯಿಗಳನ್ನು ಕೊಡಲಾಗುವುದು. ಮಿಶ್ರತಳಿ ಹಸು, ಕುರಿ ಕೋಳಿ ಮುಂತಾದವನ್ನು ಕೊಳ್ಳಲು ಸಹಾಯ ಮಾಡಲಾಗುವುದು. ಇದರಲ್ಲಿ ಕೆಲವರಿಗೆ ಬೇರೆ ಬೇರೆ ಕೆಲಸಗಳನ್ನು ಕಲಿಸುವ ಸಲುವಾಗಿ ತರಬೇತಿ ನೀಡಲಾಗಿದೆ. ಕೆಲವರಿಗೆ ಸಣ್ಣ ಸಣ್ಣ ವ್ಯಾಪಾರ ಮಾಡಲು ಸಾಲ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ, ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಬರುವ ಸಂಪಿಗೆಹಳ್ಳಿಯಲ್ಲಿ ಹತ್ತು ಜನರಿಗೆ ತಲವಾರು ಒಂದೊಂದು ಎಕರೆ ಜಮೀನನ್ನು ಕೊಡಲಾಗಿದೆ. ಜೈವಿಕ ಅನಿಲ ಯಂತ್ರಗಳನ್ನು ಇವರಿಗೆ ಒದಗಿಸಲಾಗಿದೆ. ಆದೇರೀತಿ ದಾಸಪುರ ಹೋಬಳಿ ಲಕ್ಷ್ಮೀಪುರ ಗ್ರಾಮಗಳಲ್ಲಿ ೧೯೮೫-೮೬ನೇ ಸಾಲಿನಿಂದ ೪೦ ಜನ ಜೀತವಿಮುಕ್ತರಾ ಮಾಸ ಮಾಡುತ್ತಿದ್ದಾರೆ. ಇವರಿಗೆ ವಂವೆಗಳನ್ನು ಕಟ್ಟಿಸಿಕೊಡಲಾಗಿದೆ, ಮಿಶ್ರತಳಿ ಹಸುಗಳನ್ನು ಒದಗಿಸಲಾಗಿದೆ, ಎಲ್ಲರೂ ಸಾಮೂಹಿಕವಾಗಿ ಉಪಯೋಗ ಮಾಡುವಂತಹ ಜೈವಿಕ ಅನಿಲ ಯಂತ್ರವನ್ನು ಒದಗಿಸಿಕೊಡಲಾಗಿದೆ. ಈ ಯೋಜನೆಯಲ್ಲಿ ಆಗುವಂತಹ ಖರ್ಚಿನಲ್ಲಿ ಶೇಕಡಾ ೫೦ರಷ್ಟು ಹಣವನ್ನು ಕೇಂದ್ರ ಸರ್ಕಾರ ಕೊಟ್ಟರೆ ಇನ್ನುಳಿದ ಶೇಕಡಾ ೫೦ರಷ್ಟು ಹಣವನ್ನು ರಾಜ್ಯ ಸರ್ಕಾರ ಖರ್ಚು ಮಾಡುತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲಿ ನನ್ನ ಪ್ರಶ್ನೆಯೇ ಬೇರೆ ಇದೆ. ನೀವು ಉತ್ತರ ಕೊಡುವಾಗ ಅರ್ಧ ಸರಿಯಾಗಿ ಹೇಳುತ್ತೀರಿ, ಅರ್ಧ ಸರಿಯಾಗಿ ಹೇಳುವುದಿಲ್ಲ. ಈಗ ನನ್ನ ಕ್ಷೇತ್ರದಲ್ಲಿ ಸ್ಥಾಪನೆ ಮಾಡಿರುವಂತಹ ಅಗ್ರಿಕಲ್ಚರಲ್ ಎಸ್ಟೇಟ್‌ಗಳ ಮಾದರಿಯಲ್ಲಿಯೇ ಕರ್ನಾಟಕ ರಾಜ್ಯದ ಬೇರೆ ಸ್ಥಳಗಳಲ್ಲಿಯೂ ಸ್ಥಾಪನೆ ಮಾಡಲು ಸರ್ಕಾರ ಯೋಚನೆ ಮಾಡುತ್ತಿದೆಯೇ ಅಥವಾ ಇಲ್ಲವೇ ಎಂಬುದೇ ಇಲ್ಲಿರುವ ನನ್ನ ಪ್ರಶ್ನೆ. ನೀವು ತಲವಾರು ೬೨೫೦ ರೂಪಾಯಿಗಳ ಪ್ರಕಾರ ಹಣ ಕೊಡುವ ಯೋಜನೆ ಏನು ಇಟ್ಟುಕೊಂಡಿದ್ದೀರಿ, ಇದರಲ್ಲಿ ಅರ್ಧ ಭಾಗದಷ್ಟು ಹಣವನ್ನು ಮಧ್ಯವರ್ತಿ ಜನರೇ ತಿಂದು ಬಿಡುತ್ತಾರೆ. ಇನ್ನುಳಿದ ಹಣವನ್ನು ಅವರು ಸರಿಯಾಗಿ ಬಳಸಿಕೊಳ್ಳದೆ ವ್ಯರ್ಥವಾಗಿ ಖರ್ಚು ಮಾಡಿಬಿಡುತ್ತಾರೆ. ನಂತರ ಅವರು ಮೊದಲಿನಂತೆಯೇ ಆಗಿಬಿಡುತ್ತಾರೆ. ಆದ್ದರಿಂದ ಇವರಿಗೆ ಖಾಯಂ ಆಗಿ ಪುನರ್‌ವಸತಿ ಕಲ್ಪಿಸುವುದಕ್ಕಾಗಿ ಸರ್ಕಾರದ ಹತ್ತಿರವಿರುವ ಹೆಚ್ಚುವರಿ ಜಮೀನನ್ನು ಇವರಿಗಾಗಿಯೇ ಏತಕ್ಕೆ ಮೀಸಲಿಡಬಾರದು ? ಭೂಸುಧಾರಣಾ ಕಾನೂನಿನ ಪ್ರಕಾರ ಯಾರು ಯಾರಲ್ಲಿ ಹೆಚ್ಚುವರಿ

ಜಮೀನು ಇದೆ, ಅದನ್ನೆಲ್ಲಾ ಸ್ವಾಧೀನಪಡಿಸಿಕೊಂಡು ಇವರಿಗೆ ಹಂಚುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ತಾವು ಸ್ಪಷ್ಟವಾಗಿ ಹೇಳಬೇಕು ?

ಶ್ರೀ ಎಂ.ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಉತ್ತಮವಾಗಿರತಕ್ಕಂಥ ಸಲಹೆ. ಈಗಾಗಲೇ ಸುತ್ತೋಲೆಯಲ್ಲಿ ಅದಕ್ಕೆ ಬೇಕಾಗಿರತಕ್ಕಂಥ ಮಾರ್ಗ ಸೂಚಿಯನ್ನೂ ಕೊಟ್ಟಿದ್ದೇವೆ. ಎಲ್ಲೆಲ್ಲಿ ಸರ್ಕಾರಿ ಜಮೀನು ಸಿಗುತ್ತದೆ ಅಲ್ಲಿ, ಅಥವಾ ಕಡಿಮೆ ದರದಲ್ಲಿ ಭೂಮಿ ಸಿಗುವುದಾಗಿದ್ದರೆ ಅದನ್ನು ಕೊಂಡು ಫಲಾನುಭವಿಗಳಿಗೆ ಕೊಡಬೇಕು ಎನ್ನತಕ್ಕಂಥಾದ್ದೇ ಸರ್ಕಾರದ ಉದ್ದೇಶ. ಆ ಪ್ರಕಾರವಾಗಿ ಮೈಸೂರಿನಲ್ಲಿ ೯೧೮೯ ಫಲಾನುಭವಿಗಳಿಗೆ, ಮಂಡ್ಯದಲ್ಲಿ ೧೧೩೭ ಫಲಾನುಭವಿಗಳಿಗೆ, ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ೧೧೦೮ ಫಲಾನುಭವಿಗಳಿಗೆ, ಹಾಸನದಲ್ಲಿ ೮ ಫಲಾನುಭವಿಗಳಿಗೆ ಪುನರ್ವಸತಿ ಕೇಂದ್ರಗಳ ಕೆಲಸಗಳನ್ನು ಮಾಡಬೇಕು ಎಂದೂ ಈಗಾಗಲೇ ೧೯೮೮–೮೯ನೇ ಸಾಲಿನಲ್ಲಿ ಜಿಲ್ಲಾ ಪರಿಷತ್ತುಗಳಿಗೆ ತಾಕೀತು ಮಾಡಲಾಗಿದೆ. ಹಣ ಕೂಡ ಬಿಡುಗಡೆ ಮಾಡಲಾಗಿದೆ ಆ ಕಾರ್ಯಕ್ರಮವು ಕೂಡ ಕೆಗೆದುಕೊಳ್ಳುತ್ತಾ ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಅಂತಹ ಜಮೀನುಗಳನ್ನು ಇಂತಹವರಿಗೆ ಕೊಡಬೇಕು ಎಂದೂ ನಿಯಮಾವಳಿ ಮಾಡಿದ್ದೇವೆ. ಅದರ ಪ್ರಕಾರ ಇಂಥಾದ್ದು ಎಲ್ಲೆಲ್ಲಿದೆ ಅಂಥಾದ್ದು ತೆಗೆದುಕೊಂಡು ಆದೇಶ ಕೊಡಲಿಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳಿದೆ.

ಶ್ರೀ ಎಂ.ಪಿ. ಪ್ರಕಾಶ್.—ಇದು ಬಹಳ ಒಳ್ಳೆಯ ಉತ್ತಮವಾದಂಥ ಸಲಹೆ. ಹೆಚ್ಚುವರಿ ಜಮೀನನ್ನು ಇದರಲ್ಲಿ ಒಡತನದ ಸೀಮಾರೇಖೆ ಕೆಳಗೆ ಇರತಕ್ಕಂಥ ಜನಗಳಿಗೆ ಕೊಡಬೇಕು, ಭೂರಹಿತರಿಗೆ ಕೊಡಬೇಕು ಎಂದೂ ಇದೆ. ಜೀತ ವಿಮುಕ್ತರಿಗೂ ಕೊಡಬೇಕು ಎನ್ನತಕ್ಕಂಥಾದ್ದು ಬಹಳ ಯೋಗ್ಯವಾದಂಥ ಸಲಹೆ. ಆ ರೀತಿಯಾದಂಥ ಸುತ್ತೋಲೆಯನ್ನು ಕೂಡ ಹೊರಡಿಸಲಾಗುವುದು.

ನಗರಾಭಿವೃದ್ಧಿ ಮಂಡಳಿಗಳು ಪಾಸು ಮಾಡಿದ ಠರಾವುಗಳು ಮತ್ತು ಆದೇಶಗಳನ್ನು ತಡೆ ಹಿಡಿದಿರುವುದು

೨೧೦೧. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧–೧–೧೯೮೮ರ ಬಳಿಕ ಅನುಷ್ಠಾನಕ್ಕೆ ತಂದಿರುವ ನಗರಾಭಿವೃದ್ಧಿ ಸಮಿತಿಯು ನಿರ್ಣಯಗಳು ಅನುದಾನಗಳಿಗೆ ತಡೆಹಿಡಿಯಲು ರಾಜ್ಯ ಸರ್ಕಾರ ಆದೇಶವನ್ನು ನೀಡಿದೆಯೇ ?

ಆ) ಹಾಗೆ ತಡೆ ಹಿಡಿಯಲು ಅನಿವಾರ್ಯ ವೆನಿಸಿದ ಕಾರಣಗಳಾದರೂ ಯಾವುವು ?

ಇ) ಆ ಪೈಕಿ ಅನಗತ್ಯವೆನಿಸುವ ತಡೆಯನ್ನು ರದ್ದುಪಡಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಹೌದು, ದಿನಾಂಕ ೧–೧–೧೯೮೮ ರ ಬಳಿಕ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಗುಲ್ಬರ್ಗಾ ಮತ್ತು ಮಂಗಳೂರು ನಗರಾಭಿವೃದ್ಧಿ ಮಂಡಳಿಗಳು ಪಾಸು ಮಾಡಿದ ಠರಾವುಗಳನ್ನು ಮತ್ತು ಆದೇಶಗಳನ್ನು ತಡೆಹಿಡಿಯಲಾಗಿದೆ. ಆದರೆ ಅನುದಾನಗಳಿಗೆ ಸಂಬಂಧಿಸಿದಂತೆ ಯಾವ ತಡೆಯನ್ನು ನೀಡಿಲ್ಲ.

ಆ) ೧೯೮೭ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮಗಳ ಪ್ರಕಾರ ನಗರಾಭಿವೃದ್ಧಿ ಮಂಡಳಿಗಳನ್ನು ಮತ್ತು ನಗರಯೋಜನಾ ಪ್ರಾಧಿಕಾರಗಳನ್ನು ವಿಲೀನಗೊಳಿಸಿ ನಗರಾಭಿವೃದ್ಧಿ ಪ್ರಾಧಿಕಾರಗಳೆಂದು ದಿನಾಂಕ ೧–೧–೮೮ ರಿಂದ ಜಾರಿಗೆ ತರಲಾಗಿದೆ. ಆದುದರಿಂದ ಯಾವುದೇ ತರಹದ ಲೋಪದೋಷಗಳು ಆಗಬಾರದೆಂಬ ಮುನ್ನೆಚ್ಚರಿಕೆಯಿಂದ ಮೇಲಿನಂತೆ ನಿರ್ದೇಶನ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.